# ಸಾತ್‌ಪುರದ ರಾಣಿ

ಸದಾ ತಂಪು ಹವೆಯಿರುವ ಈ ಬೆಟ್ಟಸಾಲುಗಳಲ್ಲಿ ಧರ್ಮಶ್ರದ್ಧೆಯ ಪ್ರವಾಸಿಗರ ಕುತೂಹಲ ತಣಿಸುವ ಹಲವು ದೇವಾಲಯಗಳಿವೆ.

■ ಚಿತ್ರ– ಬರಹ: **ಎನ್.ಎಸ್. ಶಾರದಾ**



ಮಧ್ಯಪ್ರದೇಶದ ಅತ್ಯಂತ ಸುಂದರ ಗಿರಿಧಾಮ ಪಚ್ಮರಿ (ಐದು ಗುಹೆಗಳು). 'ಸಾತ್‌ಪುರದ ರಾಣಿ' ಎಂದೇ ಹೆಸರು ಪಡೆದಿದೆ. ಇಲ್ಲಿ ಐದು ಗುಹೆಗಳಿವೆ. ಸಾತ್‌ಪುರ ಪರ್ವತ ಶ್ರೇಣಿಯ ಅರಾವಳಿ ಬೆಟ್ಟದಲ್ಲಿರುವ ಈ ಗುಹೆಗಳು ಶ್ರದ್ಧಾಭಕ್ತಿಯ ತಾಣವೂ ಹೌದು.

ಬೆಟ್ಟದ ಮೇಲೆ ಸಮತಟ್ಟಾದ ಪ್ರದೇಶವಿದೆ. ಅಪರೂಪದ ಸಸ್ಯಪ್ರಭೇದ–ಗಳುಳ್ಳ ಅರಣ್ಯ ಪ್ರದೇಶವೂ ಇದೆ. ಈ ಐದು ಗುಹೆಗಳನ್ನು ಪಾಂಡವರ ಗುಹೆಗಳು ಎಂದೂ ಭಾವಿಸುತ್ತಾರೆ. ಕ್ರಿ.ಪೂ. ಒಂದನೇ ಶತಮಾನದಲ್ಲಿ ಕೆಲವು ಬೌದ್ಧ ಸನ್ಯಾಸಿಗಳೂ ಈ ಗುಹೆಗಳಲ್ಲಿ ವಾಸವಿದ್ದರೆಂಬ ನಂಬಿಕೆ ಇದೆ. 6 ಅಥವಾ 7 ನೇ ಶತಮಾನದಲ್ಲಿ ಈ ಗುಹೆಗಳು ನಿರ್ಮಾಣವಾಗಿರಬೇಕು ಎನ್ನುವುದು ಪ್ರತೀತಿ. ಸುಮಾರು 8–10 ಮೆಟ್ಟಿಲುಗಳನ್ನು ಹತ್ತಿಕೊಂಡು ಹೋದರೆ 3 ಗುಹೆಗಳು ಸಿಗುತ್ತವೆ. ಮತ್ತೂ 40–50 ಮೆಟ್ಟಿಲುಗಳನ್ನು ಏರಿದರೆ ಇನ್ನೆರಡು ಗುಹೆಗಳು ಸಿಗುತ್ತವೆ. ಮೇಲಿನಿಂದ ನೋಡಿದರೆ ಕೆಳಗಿನ ಬೆಟ್ಟಸಾಲುಗಳ ವಿಹಂಗಮ ದೃಶ್ಯ ಮನಸೆಳೆಯುತ್ತದೆ.

ಮೇಲೆ ನಿಂತರೆ ಕೆಳಗೆ ಕಾಣಿಸುವುದೇ ಹಾಂಡಿ ಕಣಿವೆ. ಆಳದ ಕಣಿವೆ ಮತ್ತು ಸುತ್ತಲೂ ಇರುವ ಸುಂದರವಾದ ಬೆಟ್ಟ–ಸಾಲುಗಳು ಈ ಗಿರಿಧಾಮದ ಕೇಂದ್ರ ಆಕರ್ಷಣೆ. ಕಣಿವೆಯಲ್ಲಿ ಭಾರೀ ಸಂಖ್ಯೆಯಲ್ಲಿ ಜೇನುಗೂಡುಗಳಿರುವುದೂ ಗಮನ ಸೆಳೆಯುತ್ತದೆ. ಬ್ರಿಟಿಷ್ ಅಧಿಕಾರಿ ಹಾಂಡಿ ಎಂಬಾತ ಇಲ್ಲಿಂದ ಕೆಳಕ್ಕೆ ಜಿಗಿದು ಆತ್ಮಹತ್ಯೆ ಮಾಡಿದ್ದರಿಂದ ಕಣಿವೆಗೆ ಆತನ ಹೆಸರೇ ಬಂದಿದೆ ಎನ್ನುತ್ತಾರೆ.